CC No.2615/2022 PW-1

ಸಿ.ಸಿ.**-2615/2022**
ಪಿ.ಡಬ್ಲ್ಯೂ **-1**

ದಿನಾಂಕ 23-04-2025 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ:**

ಮಾರುತಿ ಪಾಟೀಲ ನನ್ನ ಅಣ್ಣ ಎಂದು ಸೂಚಿಸಿದರೆ ಸರಿ . ಆರೋಪಿ ನನಗೆ ಏಜೆಂಟ್ ಫೈಜುದ್ದೀನ ಇನಾಮದಾರ ಇವರಿಂದ ಪರಿಚಯ. ಮೊದಲು ನನಗೆ ಆರೋಪಿ ಪರಿಚಯ ಇದ್ದಿರಲಿಲ್ಲ. ಸದರಿ ಏಜೆಂಟ ಪರಿಚಯಿಸಿದ ನಂತರವೇ ಪರಿಚಯ. ಸದರಿ ಏಜೆಂಟ ನನಗೆ ದಿನಾಂಕ **06.12.2019** ರಂದು ಟ್ರ್ಯಾಕ್ಟರನ್ನು ತೋರಿಸಿದ್ದನು. ನನ್ನ ಅಣ್ಣ , ನನ್ನ ತಂಗಿ ಮಗ ಕೃಷ್ಣಾ ಹಾಗೂ ಫೈಜುದ್ದೀನ ಎಲ್ಲರೂ ಸೇರಿ ಟ್ರ್ಯಾಕ್ಟರ ವ್ಯವಹಾರ ಮಾಡಿದ್ದರು. ಸದರಿ ಟ್ರ್ಯಾಕ್ಟರ ನಂ. ಕೆಎ**-17/**ಟಿಸಿ**-5233** ಇರುತ್ತದೆ. ಸದರಿ ಟ್ರ್ಯಾಕ್ಟರ ವ್ಯವಹಾರವು ರೂ.**3,30,000/-** ಕ್ಕೆ ಮುಗಿಯಿತು. ಸದರಿ ಟ್ರ್ಯಾಕ್ಟರಗೆ ಸಂಬಂಧ ಪಟ್ಟಂತೆ ಕರಾರು ಪತ್ರ ಮಾಡಲಾಯಿತು. ಸದರಿ ದಿನವೇ ಕರಾರು ಪತ್ರ ಮಾಡಲಿಲ್ಲ ತದನಂತರ ಬರೆಯಲಾಯಿತು. ಸದರಿ ಕರಾರು ಪತ್ರವನ್ನು ನಾನು ನಮ್ಮ ವಕೀಲರ ಹತ್ತಿರ ನೀಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಆರೋಪಿತನು ನನಗೆ **8** ದಿನಗಳಲ್ಲಿ ಎಲ್ಲ ಕಾಗದ ಪತ್ರಗಳನ್ನು ಕೊಡುತ್ತೇನೆ ಎಂದು ಹೇಳಿದ್ದನು. ಚೆಕ್ಕನ್ನು ಆರೋಪಿಯೇ ನನಗೆ ನೀಡಿದ್ದಾನೆ. ದಿಃ**21.02.2020** ರಲ್ಲಿ ನನಗೆ ಚೆಕ್‌ನ್ನು ಆರೋಪಿ ನನಗೆ ನೀಡಿದ್ದಾನೆ. ನಾನು ಹಣವನ್ನು ಆರೋಪಿಗೆ ನೀಡಿದ್ದೇನೆ. ನಾನು ಟ್ರ್ಯಾಕ್ಟರನ್ನು ಡೆಲಿವರಿ ತೆಗೆದುಕೊಂಡಿದ್ದೇನೆ ಹಾಗೂ ಆರೋಪಿ ನನಗೆ ಚೆಕ್‌ನ್ನು ನೀಡಿದ್ದಾನೆ. ಆರೋಪಿ ನನಗೆ ಟ್ರ್ಯಾಕ್ಟರಗೆ ಸಂಬಂಧ ಪಟ್ಟ ದಾಖಲೆಯನ್ನು ಕೊಟ್ಟಿದಿಲ್ಲ ಹಾಗಾಗಿ ಚೆಕ್‌ನ್ನು ನೀಡಿರುತ್ತಾನೆ. ಇಲ್ಲಿಯವರೆಗೂ ಆರೋಪಿ ನನಗೆ ಯಾವುದೇ ಟ್ರ್ಯಾಕ್ಟರ ದಾಖಲೆಗಳನ್ನು ನೀಡಿರುವುದಿಲ್ಲ. ಸದರಿ ಕರಾರು ಪತ್ರ ಬರೆದ ದಿನವೇ ಕಾಗದ ಪತ್ರಗಳನ್ನು ತೆಗೆದುಕೊಳ್ಳಲು ಏನು ತೊಂದರೆ ಇತ್ತು ಎಂಬ ಪ್ರಶ್ನೇಗೆ ಸಾಕ್ಷಿದಾರರು ಆರೋಪಿತನು ದುಡ್ಡು ತೆಗೆದುಕೊಂಡು ಪೊಲೀಸ ಠಾಣೆಯಿಂದ ಓಡಿ ಹೋದನು. ಆರೋಪಿಯು ನಾನು ಖಾನಾಪೂರದಲ್ಲಿ ಹಣವನ್ನು ನೀಡಿದಕ್ಕಾಗಿ ಚೆಕ್‌ನ್ನು ನೀಡಿರುತ್ತಾನೆ.

ಪ್ರಶ್ನೇ**)** ಆರೋಪಿಯು ನಿನಗೆ ಚೆಕ್‌ನ್ನು ಏಕೆ ನೀಡಿದ್ದಾನೆ**?**

ಉತ್ತರಃ ನಾನು ಟ್ರ್ಯಾಕ್ಟರಗೆ ಹಣವನ್ನು ನೀಡಿದ್ದರೂ ಸಹಿತ ಆರೋಪಿಯು ನನಗೆ ಟ್ರ್ಯಾಕ್ಟರಗೆ ಸಂಬಂಧ ಪಟ್ಟ ಕಾಗದ ಪತ್ರಗಳನ್ನು ನೀಡದೇ ಇದುದ್ದರಿಂದ ಭದ್ರತೆಗಾಗಿ ಚೆಕ್‌ನ್ನು ನೀಡಿದ್ದು ಇರುತ್ತದೆ.

ನಾನು ಟ್ರ್ಯಾಕ್ಟರನ ಪೂರ್ತಿ ಹಣವನ್ನು ನೀಡಿದೇ ಇರುವುದಕ್ಕಾಗಿ ಆರೋಪಿಯು ಕಾಗದ ಪತ್ರಗಳನ್ನು ನೀಡಿರಲಿಲ್ಲ ಎಂದು ಸೂಚಿಸಿದರೆ ಸರಿ . ನನ್ನ ಹಾಗೂ ಆರೋಪಿತನ ಮಧ್ಯ ಈ ಟ್ರ್ಯಾಕ್ಟರ ವ್ಯವಹಾರ ಬಿಟ್ಟು ಬೇರೆ ಯಾವ ವ್ಯವಹಾರವು ಇರಲಿಲ್ಲ. ನನಗೆ ಈ ಮೊದಲು ಆರೋಪಿತ ಪರಿಚಯ ಇರಲಿಲ್ಲ. ಅದಕ್ಕೂ ಮೊದಲು ಅವನು ನನಗೆ ಸ್ನೇಹಿತ ಇರಲಿಲ್ಲ. ಆರೋಪಿತನು ನನ್ನಿಂದ ಕೈಗಡ ಹಣವನ್ನು ಟ್ರ್ಯಾಕ್ಟರ ಖರೀದಿ ಮಾಡಲಿಕ್ಕೆ ಪಡೆದುಕೊಂಡಿಲ್ಲ. ಆರೋಪಿಗೆ ನಾನು ಬೇರೆ ಟ್ರ್ಯಾಕ್ಟರ ಖರೀದಿ ಮಾಡಲಿಕ್ಕೆ ಹಣ ಕೊಟ್ಟಿಲ್ಲ. ನನ್ನ ಪಿರ್ಯಾದಿಯಲ್ಲಿ ಬರೆಸಿದಂತೆ ಆರೋಪಿತನು ನನ್ನಿಂದ ಕೈಗಡವಾಗಿ ಟ್ರ್ಯಾಕ್ಟರ ಖರೀದಿಸಲು ಯಾವುದೇ ಹಣವನ್ನು ಪಡೆದಿಲ್ಲ. ನನ್ನ ಪಿರ್ಯಾದಿಯಲ್ಲಿ ಬರೆದಿರುವಂತೆ ನಾನು ಹಾಗೂ ಆರೋಪಿತ ಸ್ನೇಹಿತ ಹಾಗೂ ಆತನು ನನ್ನಿಂದ ಕೈಗಡ ಹಣವನ್ನು ತೆಗೆದುಕೊಂಡ ಎಂಬ ಅಂಶ ಸುಳ್ಳು ಇರುತ್ತದೆ.

ಫೈಜುದ್ದೀನ ಇನಾಮದಾರ ಹಳ್ಳಿ ಹಳ್ಳಿಗೆ ಹೋಗಿ ಟ್ರ್ಯಾಕ್ಟರ ಬಗ್ಗೆ ಪ್ರಚಾರ ಮಾಡಿ ಹೊಸ ಟ್ರ್ಯಾಕ್ಟರನ್ನು ಮಾರಾಟ ಮಾಡುತ್ತಾನೆ. ಆತನ ಕಚೇರಿ ಬೆಳಗಾವಿಯಲ್ಲಿ ಇದೆ. ನನ್ನ ಜೊತೆ ಫೈಜುದ್ದೀನ ಇನಾಮದಾರ ಯಾವುದೇ ವ್ಯವಹಾರ ಮಾಡಿಲ್ಲ, ಆದರೆ ಆರೋಪಿ ಮಾಡಿದ್ದಾನೆ. ನಾನು ಫೈಜುದ್ದೀನ ಇನಾಮದಾರ ಇವರ ಸಾಕ್ಷಿ ಮಾಡಿಸಲು ಆಗುವುದಿಲ್ಲ, ಏಕೆಂದರೆ ಅವನು ಬೆಳಗಾವಿ ಊರು ಬಿಟ್ಟು ಹೋಗಿದ್ದಾನೆ. ಆತನ ಫೋನ ಕೂಡ ಸ್ವೀಚ್ ಆಫ ಆಗಿದೆ. ನಾನು ಈ ಪ್ರಕರಣದ ಚೆಕ್‌ನ್ನು ಫೈಜುದ್ದೀನ ಇನಾಮದಾರ ಈತನ ಕಡೆಯಿಂದ ತಗೆದುಕೊಂಡಿದ್ದೇನೆ ಎಂದು ಸೂಚಿಸಿದರೆ ಸರಿಯಲ್ಲ. ಫೈಜುದ್ದೀನ ಇನಾಮದಾರ ನನ್ನ ಕಡೆಯಿಂದ ಮೊದಲು ಹಣವನ್ನು ತೆಗೆದುಕೊಂಡಿದ್ದಾನೆ ಎಂದು ಸೂಚಿಸಿದರೆ ಸರಿ . ಫೈಜುದ್ದೀನ ಇನಾಮದಾರ ಈತನೇ ಎಲ್ಲ ದಾಖಲೆಗಳಿಗೆ ನನ್ನ ಸಹಿಯನ್ನು ತೆಗೆದುಕೊಂಡಿದ್ದನು ಎಂದು ಸೂಚಿಸಿದರೆ ಸರಿಯಲ್ಲ. ನಾನು

ಪೊಲೀಸ ಠಾಣೆಗೆ ಸದರಿ ಟ್ರ್ಯಾಕ್ಟರನ್ನು ಹಾಜರು ಪಡಿಸಿದ್ದೇನೆ ಎಂದು ಸೂಚಿಸಿದರೆ ಸರಿ . ಟ್ರ್ಯಾಕ್ಟರನ್ನು ಸೀಜ್ ಮಾಡಿದಾಗ ಸದರಿ ಟ್ರ್ಯಾಕ್ಟರಗೆ ಎರಡು ಬದಿಯಲ್ಲಿ ನಂಬರ ಪ್ಲೇಟ ಇತ್ತು ಎಂದು ಸೂಚಿಸಿದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

**C/c.**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.